# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ತಿಪ್ಪಣ್ಣಪ್ಪ ಕಮಕನೂರು ಇವರ ನಿಯಮ 72 ರಡಿ ಗಮನ ಸೆಳೆಯುವ ಸೂಚನೆಗೆ ಕರಡು ಉತ್ತರ**

**ಪ್ರಶ್ನೆ:-** ಗುಲ್ಬರ್ಗದಲ್ಲಿ ಕೊಳಚೆ ನಿರ್ಮೂಲನಾ ಮಂಡಳಿ ವತಿಯಿಂದ ಕಟ್ಟಿರುವ ಮನೆಗಳ ವಿವರ, ಬಾಕಿ ಇರುವ ಮನೆಗಳು, ಇದರ ಗುತ್ತಿಗೆದಾರರ ವಿವರ ಹಾಗೂ ಮನೆ ಕಟ್ಟುವ ಕಾರ್ಯ ನಿಗಧಿತ ಅವಧಿಯಲ್ಲಿ ಪೂರ್ತಿಯಾಗದಿರುವ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತೇನೆ.

**ಉತ್ತರ :-** ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಆವಾಸ್ ಯೋಜನೆ(ನಗರ) (PMAY-U) ಯೊಂದಿಗೆ ಸಮನ್ವಯಗೊಳಿಸಿ ರಾಜ್ಯ ಸರ್ಕಾರದ ವಿವಿಧ ವಸತಿ ಯೋಜನೆಗಳಾದ ಡಾ:ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆ ಮತ್ತು ವಾಜಪೇಯಿ ನಗರ ವಸತಿ ಯೋಜನೆಯನ್ನು ರಾಜ್ಯದ ವಿವಿಧ ನಗರ / ಪಟ್ಟಣಗಳ ವ್ಯಾಪ್ತಿಯಲ್ಲಿ ಬರುವ ವಿವಿಧ ಕೊಳಗೇರಿ ಪ್ರದೇಶಗಳಲ್ಲಿ ವಸತಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಪ್ರಸ್ತಾಪಿತ ಯೋಜನೆಯಡಿ ಕಲಬುರಗಿ ನಗರ ವ್ಯಾಪ್ತಿಯಲ್ಲಿ ಬರುವ ವಿವಿಧ ಕೊಳಗೇರಿ ಪ್ರದೇಶಗಳಲ್ಲಿ ಹಂತ-1 ರಡಿ 3,300 ಮನೆಗಳನ್ನು ಹಾಗೂ ಹಂತ-2 ರಡಿ 9,216 ಮನೆಗಳು ಸೇರಿ ಒಟ್ಟು 12,516 ಮನೆಗಳ ನಿರ್ಮಾಣ ಮಾಡಲು ಕೇಂದ್ರ ಸರ್ಕಾರದಿಂದ ಮಂಜೂರಾತಿ ದೊರಕಿರುತ್ತದೆ.

ಪ್ರಸ್ತಾಪಿತ ಯೋಜನೆಯಡಿ ಕಟ್ಟಿರುವ ಮನೆಗಳ ವಿವರ, ಬಾಕಿ ಇರುವ ಮನೆಗಳ, ಗುತ್ತಿಗೆದಾರರ ವಿವರಗಳು ಈ ಕೆಳಕಂಡಂತಿವೆ.

## PMAY (U)-HFA ಹಂತ-1

| ಕ್ರ. ಸಂ | ಕಾಮಗಾರಿಯ ಹೆಸರು | ಗುತ್ತಿಗೆದಾರರ ಹೆಸರು | ಮನೆಗಳ ಸಂಖ್ಯೆ | ಭೌತಿಕ ಪ್ರಗತಿ | | | | | | | |
|---|---|---|---|---|---|---|---|---|---|---|---|
| | | | | ಬುನಾದಿ | ಪ್ಲಿಂತ್ | ಲಿಂಟಲ್ | ರೂಫ್ ಲೆಡ್ | ಫಿನಿಷಿಂಗ್ | ಮುಕ್ತಾಯ ಹಂತ | ಒಟ್ಟು | ಪ್ರಾರಂಭಿಸದೆ ಇರುವ ಮನೆಗಳು |
| 1 | ಕಲಬುರಗಿ 500 | ಶ್ರೀ ಸೈಯದ್ ಮನ್ನಾನ್ | 500 | 00 | 00 | 00 | 20 | 00 | 480 | 500 | 00 |
| 2 | ಶಹಬಾದ 250 | ಶ್ರೀ ಸೈಯದ್ ಮನ್ನಾನ್ | 250 | 05 | 115 | 07 | 87 | 00 | 13 | 227 | 23 |
| 3 | ಚಿಂಚೋಳಿ 250 | ಶ್ರೀ ಸೈಯದ್ ಮನ್ನಾನ್ | 250 | 00 | 00 | 00 | 00 | 00 | 250 | 250 | 00 |
| 4 | ಆಳಂದ 250 | ಶ್ರೀ ಸೈಯದ್ ಮನ್ನಾನ್ | 250 | 00 | 00 | 00 | 00 | 00 | 250 | 250 | 00 |
| 5 | ಅಫಜಲ್‌ಪುರ 250 | ಶ್ರೀ ಸೈಯದ್ ಮನ್ನಾನ್ | 250 | 00 | 00 | 00 | 00 | 00 | 250 | 250 | 00 |
| 6 | ಸೇಡಂ 400 | ಜೆ.ಎಂ. ಕನ್ಸ್ಟ್ರಕ್ಷನ್ ಕಂಪನಿ. | 400 | 06 | 169 | 32 | 62 | 17 | 114 | 400 | 00 |
| 7 | ಚಿತ್ತಾಪೂರ 1000 | ಶ್ರೀ.ಕೆ.ಎಂ.ವಿ. ಪ್ರೋಜೆಕ್ಟ್ ಲಿಮಿಟೆಡ್, | 1000 | 00 | 00 | 00 | 00 | 00 | 1000 | 1000 | 00 |
| 8 | ಜೇವರ್ಗಿ 400 | ಜೆ.ಎಂ. ಕನ್ಸ್ಟ್ರಕ್ಷನ್ ಕಂಪನಿ. | 400 | 19 | 22 | 25 | 63 | 99 | 172 | 400 | 00 |
| **ಒಟ್ಟು** | | | **3300** | **30** | **306** | **64** | **232** | **116** | **2529** | **3277** | **23** |

## PMAY (U)-HFA ಹಂತ-2

| ಕ್ರ. ಸಂ | ಕಾಮಗಾರಿಯ ಹೆಸರು | ಗುತ್ತಿಗೆದಾರರ ಹೆಸರು | ಮನೆಗಳ ಸಂಖ್ಯೆ | ಭೌತಿಕ ಪ್ರಗತಿ | | | | | | | |
|---|---|---|---|---|---|---|---|---|---|---|---|
| | | | | ಬುನಾದಿ | ಪ್ಲಿಂತ್ | ಲಿಂಟಲ್ | ರೂಫ್ ಲೆಡ್ | ಫಿನಿಷಿಂಗ್ | ಮುಕ್ತಾಯ ಹಂತ | ಒಟ್ಟು | ಪ್ರಾರಂಭಿಸದೆ ಇರುವ ಮನೆಗಳು |
| 01 | ಕಲಬುರಗಿ ಉತ್ತರ ಮತಕ್ಷೇತ್ರ | ಎಸ್ ಎಮ್ ಸಿ ಪ್ರೋಜೆಕ್ಟ್ಸ್ ಕಲಬುರಗಿ | 1482 | 3 | 91 | 77 | 114 | 5 | 0 | 290 | 1192 |
| 02 | ಕಲಬುರಗಿ ದಕ್ಷಿಣ ಮತಕ್ಷೇತ್ರ | ಎಸ್ ಎಮ್ ಸಿ ಪ್ರೋಜೆಕ್ಟ್ಸ್ ಕಲಬುರಗಿ | 1447 | 18 | 279 | 101 | 121 | 43 | 4 | 566 | 881 |
| 03 | ಆಳಂದ | ಎಸ್ ಎಮ್ ಸಿ ಪ್ರೋಜೆಕ್ಟ್ಸ್ ಕಲಬುರಗಿ | 1314 | 0 | 8 | 17 | 45 | 25 | 0 | 95 | 1219 |
| 04 | ಜೇವರ್ಗಿ | ಜೆ ಎಮ್ ಸಿ | 750 | 18 | 251 | 58 | 54 | 33 | 0 | 414 | 336 |
| 05 | ಶಹಬಾದ | ಎಸ್ ಎಮ್ ಸಿ ಪ್ರೋಜೆಕ್ಟ್ಸ್ ಕಲಬುರಗಿ | 1473 | 0 | 540 | 0 | 0 | 0 | 0 | 540 | 933 |
| 06 | ಸೇಡಂ | ಜೆ ಎಮ್ ಸಿ | 467 | 0 | 251 | 0 | 214 | 0 | 0 | 465 | 2 |
| 07 | ಸೇಡಂ | ಜೆ ಎಮ್ ಸಿ | 283 | 0 | 96 | 0 | 180 | 0 | 0 | 276 | 7 |
| 08 | ಚಿಂಚೋಳಿ | ಎಸ್ ಎಮ್ ಸಿ ಪ್ರೋಜೆಕ್ಟ್ಸ್ ಕಲಬುರಗಿ | 1263 | 0 | 420 | 0 | 120 | 0 | 0 | 540 | 723 |
| 09 | ಕಾಳಗಿ | ಎಸ್ ಎಮ್ ಸಿ ಪ್ರೋಜೆಕ್ಟ್ಸ್ ಕಲಬುರಗಿ | 737 | 0 | 250 | 0 | 0 | 0 | 0 | 250 | 487 |
| ಒಟ್ಟು | | | **9216** | **39** | **2186** | **253** | **848** | **106** | **4** | **3436** | **5780** |

ಈ ಮನೆಗಳನ್ನು ಹಾಲಿ ಕೊಳಗೇರಿ ಪ್ರದೇಶಗಳಲ್ಲಿ ಫಲಾನುಭವಿಗಳು ವಾಸಿಸುತ್ತಿರುವ ಕಚ್ಚಾ ಮನೆಗಳು/ಗುಡಿಸಲುಗಳನ್ನು ತೆರವುಗೊಳಿಸಿ ಮನೆಗಳನ್ನು ನಿರ್ಮಿಸಬೇಕಾಗಿರುತ್ತದೆ. ಯೋಜನೆಯ ನಿಯಮಾನುಸಾರ ಕೇಂದ್ರ ಸರ್ಕಾರ / ರಾಜ್ಯ ಸರ್ಕಾರದ ಸಹಾಯಧನ ಮತ್ತು ಫಲಾನುಭವಿಗಳು ವಂತಿಕೆ ಮೊತ್ತವನ್ನು ಸಂಗ್ರಹಿಸಿಕೊಂಡು ಕಾಮಗಾರಿಯನ್ನು ಪ್ರಾರಂಭಿಸಲಾಗಿದ್ದು ಕಾಮಗಾರಿಯು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತದೆ. ಸದರಿ ಯೋಜನೆಯ ಒಂದು ಮನೆಯ ಘಟಕ ವೆಚ್ಚವು ರೂ. 5.40 ಲಕ್ಷಗಳಿಂದ ರೂ.7.76 ಲಕ್ಷಗಳಾಗಿದ್ದು (GST ಒಳಗೊಂಡಂತೆ), ಕೇಂದ್ರ ಸರ್ಕಾರದ ಸಹಾಯಧನ ರೂ.1.50 ಲಕ್ಷಗಳು ಮತ್ತು ರಾಜ್ಯ ಸರ್ಕಾರದ ಸಹಾಯಧನ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ವರ್ಗಕ್ಕೆ ರೂ.2.00 ಲಕ್ಷಗಳು ಇತರೇ ವರ್ಗಕ್ಕೆ ರೂ.1.20 ಲಕ್ಷಗಳಾಗಿರುತ್ತದೆ. ಫಲಾನುಭವಿಗಳ ಪ್ರಾರಂಭಿಕ ವಂತಿಕೆ (ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ವರ್ಗಕ್ಕೆ ಶೇ. 10 ರಷ್ಟು ಮತ್ತು ಸಾಮಾನ್ಯ ವರ್ಗಕ್ಕೆ 15 ರಷ್ಟು) ಮೊತ್ತವನ್ನು ಹೊರತುಪಡಿಸಿ, ಬಾಕಿ ಉಳಿದ ಮೊತ್ತಕ್ಕೆ ಬ್ಯಾಂಕ್ ಗಳಿಂದ / ಕಾರ್ಮಿಕ ಗೃಹ ಭಾಗ್ಯ ಯೋಜನೆಯಡಿ ಸಾಲಸೌಲಭ್ಯ ಒದಗಿಸಿ ಮನೆಗಳ ನಿರ್ಮಾಣವನ್ನು ಪೂರ್ಣಗೊಳಿಸಬೇಕಾಗಿರುತ್ತದೆ.

ಸದರಿ ಯೋಜನೆಯ ಹಂತ-1 ಮತ್ತು ಹಂತ-2 ರ ಒಟ್ಟು 12,516 ಮನೆಗಳಿಗೆ ಒಟ್ಟು ಫಲಾನುಭವಿಗಳ ವಂತಿಕೆ ಮೊತ್ತ ರೂ.402.43 ಕೋಟಿಗಳಾಗಿರುತ್ತದೆ (GST ಒಳಗೊಂಡಂತೆ). ಈವರೆಗೆ ರೂ.63.49 ಕೋಟಿಗಳು ಮಾತ್ರ ಸಂಗ್ರಹವಾಗಿದ್ದು, ಬಾಕಿ ಫಲಾನುಭವಿ ವಂತಿಕೆ ರೂ.338.93 ಕೋಟಿಗಳನ್ನು ಸಂಗ್ರಹ ಮಾಡಬೇಕಿರುತ್ತದೆ. ಫಲಾನುಭವಿ ವಂತಿಕೆ ಮನೆಗಳ ಘಟಕ ವೆಚ್ಚದ ಶೇಕಡ 45 ರಿಂದ 55 ರಷ್ಟಿದ್ದು, ಒಟ್ಟು 12,516 ಮನೆಗಳಿಗೆ ಬಾಕಿ ಫಲಾನುಭವಿ ವಂತಿಕೆ ರೂ.338.93 ಕೋಟಿಗಳನ್ನು ಬ್ಯಾಂಕ್ / ಇತರೆ ಮೂಲಗಳಿಂದ ಕ್ರೋಢೀಕರಿಸಿಕೊಂಡು ಹಾಗೂ

ಫಲಾನುಭವಿಗಳಿಂದ ವಂತಿಕೆ ಮೊತ್ತವನ್ನು ವಸೂಲಿ ಮಾಡಿಕೊಂಡು, ಕೇಂದ್ರ ಸರ್ಕಾರವು PMAY (U) ಯೋಜನೆಯನ್ನು ಅನುಷ್ಠಾನಗೊಳಿಸಲು ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗುತ್ತಿದೆ.

**(ಬಿ.ಜೆಡ್.ಜಮೀರ್ ಅಹ್ಮದ್ ಖಾನ್)**
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು.